ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

DTE-ADMI0ACM2/25/2022

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು - 560 001.
ದಿನಾಂಕ:19-04-2022.

-:ಸಭಾ ಸೂಚನಾ ಪತ್ರ:-

**ವಿಷಯ:** 2022-23ನೇ ಶೈಕ್ಷಣಿಕ ಸಾಲಿನ ಡಿಪ್ಲೋಮಾ ಪ್ರವೇಶಾತಿ ಸಂಬಂಧ ಕಾರ್ಯಾಗಾರವನ್ನು ಏರ್ಪಡಿಸಿರುವ ಬಗ್ಗೆ.

*******

**ದಿನಾಂಕ:25-04-2022ರ ಸೋಮವಾರದಂದು ಬೆಳಿಗ್ಗೆ 10.00 ರಿಂದ ಸಂಜೆ 06.00 ರವರೆಗೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ** 2022-23ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದಲ್ಲಿನ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರಥಮ ವರ್ಷ ಡಿಪ್ಲೋಮಾ ಪ್ರವೇಶಾತಿಯನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಳ ಮಾಡಲು ಕೈಗೊಳ್ಳಬೇಕಾದ ಕ್ರಮಗಳು ಹಾಗೂ ವಿದ್ಯಾರ್ಥಿಗಳಲ್ಲಿ ಡಿಪ್ಲೋಮಾ ವ್ಯಾಸಂಗದ ಬಗ್ಗೆ ಹೆಚ್ಚಿನ ಪ್ರಮಾಣದ ಅರಿವನ್ನು ಮೂಡಿಸಿ ಆ ನಿಟ್ಟಿನಲ್ಲಿ ಡಿಪ್ಲೋಮಾ ಪ್ರವೇಶಾತಿಯನ್ನು ಹೆಚ್ಚಿಸುವ ಬಗ್ಗೆ ಚರ್ಚಿಸಲು ಕಾರ್ಯಾಗಾರವನ್ನು ಹಾಗೂ ಹಿಂದಿನ ಸಾಲಿನಲ್ಲಿ ಉತ್ತಮ ಪ್ರವೇಶಾತಿ ಮಾಡಿರುವ ಪ್ರಾಂಶುಪಾಲರುಗಳಿಗೆ ಸನ್ಮಾನ ಕಾರ್ಯಕ್ರಮವನ್ನು **ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಂಗಣ, ಕಬ್ಬನ್ ಪಾರ್ಕ್, ಬೆಂಗಳೂರು** ಇಲ್ಲಿ ಏರ್ಪಡಿಸಲಾಗಿರುತ್ತದೆ. ಪ್ರಯುಕ್ತ ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಗಳ ಪ್ರಾಂಶುಪಾಲರು ಹಾಗೂ ಡಿಪ್ಲೋಮಾ ಪ್ರವೇಶಕ್ಕೆ ಹೆಚ್ಚಿನ ಸಂಖ್ಯೆ ವಿದ್ಯಾರ್ಥಿಗಳನ್ನು ಆಕರ್ಷಿಸುವಂತ ಪೂರಕ ಅಂಶಗಳ ಬಗ್ಗೆ ಹೆಚ್ಚಿನ ಅನುಭವವುಳ್ಳ ಒಬ್ಬ ನುರಿತ ಉಪನ್ಯಾಸಕರೊಡನೆ ಖುದ್ದಾಗಿ ಕಾರ್ಯಾಗಾರಕ್ಕೆ ಹಾಜರಾಗಲು ಸೂಚಿಸಿದೆ.

ಈ ಕಾರ್ಯಾಗಾರಕ್ಕೆ ಹಾಜರಾಗುವ ಪ್ರಾಂಶುಪಾಲರು ಹಾಗೂ ಉಪನ್ಯಾಸಕರು ಕೆಸಿಎಸ್ ನಿಯಮಗಳ ಪ್ರಕಾರ ದಿನಭತ್ಯೆ ಹಾಗೂ ಪ್ರಯಾಣ ಭತ್ಯೆ ಪಡೆಯಲು ಅರ್ಹರಿರುತ್ತಾರೆ.

**"ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"**

**ಜಂಟಿ ನಿರ್ದೇಶಕರು (ಆಡಳಿತ)**
**ತಾಂತ್ರಿಕ ಶಿಕ್ಷಣ ಇಲಾಖೆ**
**ಬೆಂಗಳೂರು.**

19/4/22

ಇವರಿಗೆ,

ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ.

**ಪ್ರತಿ:**

1. ಮಾನ್ಯ ಆಯುಕ್ತರ ಆಪ್ತಶಾಖೆಗೆ.
2. ಮಾನ್ಯ ನಿರ್ದೇಶಕರ ಆಪ್ತಶಾಖೆಗೆ.
3. ಜಂಟಿ ನಿರ್ದೇಶಕರು(ಆಡಳಿತ) ಇವರ ಆಪ್ತ ಶಾಖೆಗೆ.
4. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ಆಯುಕ್ತಾಲಯದ ಎಲ್ಲಾ ಅಧಿಕಾರಿ/ಸಿಬ್ಬಂದಿಯವರಿಗೆ.
6. ಇ-ಗರ್ವನೆನ್ಸ್ ವಿಭಾಗಕ್ಕೆ --ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು..
7. ಲೆಕ್ಕಾಧಿಕಾರಿಗಳು (ಬಿಲ್ಸ್), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
8. ಡಿವಿಪಿ(1) ವಿಭಾಗಕ್ಕೆ.
9. ನಗದು ವಿಭಾಗಕ್ಕೆ.
10. ಕಛೇರಿ ಪ್ರತಿ.